ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ತಾರೀಖು 29ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಬುಕ್ಕಾಪಟ್ಣ, ಮಂಜಲುದೊರೆ, ತೀರ್ಥರಾಂಪುರ ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು 1896—97ನೇ ಸಾಲೆ ಅಂದರೆ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂನ್ ಆಖೈರುವರಿಗೆ ಜಮಾಯಿಸಿಕೊಳ್ಳುವ ಹಕ್ಕು ತುಮಕೂರ್ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಅಥವಾ ಅವರಿಂದ ನೇಮಿಸಲ್ಪಡುವ ಸಬ್ ಆಸಿಸ್ಟೆಂಟ್ ಕಂಸರ್‌ವೇಟರ್ ರೂಬರೂ 1896ನೇ ಇಸವಿ ಸೆಪ್ಟಂಬರ್ ತಾರೀಖು 4ರಲ್ಲು ಬಹಿರಂಗವಾಗಿ ತುಮಕೂರ್ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ಹರಾಜುಮಾಡಲ್ಪಡುತ್ತೆ.

2 ಚಡಸವಾಲ್‌ದಾರನು ಹರಾಜು ಕೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಮೊಬಲಗು ತೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು ಹದಿನೈದರ ದಿವಸದವಳಗಾಗಿ ಪಾವತಿ ಮಾಡತಕ್ಕದ್ದು, ಪೂರಾ ಹರಾಜು ಮೊಬಲಗ್ಗೆ ರೂಪಾಯಿ ಬಂದಕ್ಕೆ ಬಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ಮಾಡಲ್ಪಡುವದು.

3. ಖಿಸ್ತು ಮೊಬಲಗು ಗೊತ್ತಾದ ಕಾಲದವಳಗಾಗಿ ಪಾವತಿ ಮಾಡದೆ ಹೋದರೆ ಚಡಸವಾಲ್‌ದಾರನ ತೇವಣಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಅವಲ್ ಇಜಾರೆದಾರನ್ನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಉಂಟಾಗುವ ಘಾಯಿದೆ ಭಾಗ ಅವಲ್ ಇಜಾರೆದಾರನು ಹೊಂದಲು ಅರ್ಹನಾಗುವದಿಲ್ಲ

4. ಹರಾಜು ಮಂಜೂರಾದ ಕೂಡ್ಲೆ ಇಜಾರೆದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಹೆಸರಿಗೆ ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನ ಬರದುಕೊಡಬೇಕು. ಈ ಮುಚ್ಚಳಿಕೇ ಷರತ್ತುಗಳು ಹರಾಜುಕಾಲದಲ್ಲಿ ತಿಳಿಸಲ್ಪಡುತ್ತೆವೆ.

ತಾರೀಖು 29ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರ್ ಡಿಸ್ಟ್ರಿಕ್ಟಿನಲ್ಲಿರುವ ದೇವರಾಯದುರ್ಗ, ಮದ್ದಗಿರಿ, ಕುದರೆಕಣಿವೆ, ಹುಲಿಯೂರುದುರ್ಗ, ಕಂಪ್ಲಾಪುರ, ಬುಕ್ಕಾಪಟ್ಣ, ಮಂಜಲುದೊರೆ, ತೀರ್ಥರಾಂಪುರ ಸ್ಟೇಟ್ ಫಾರೆಸ್ಟುಗಳಲ್ಲಿರತಕ್ಕ ಕಲ್ಲು ಹುಪ್ಪು 1896—97ನೇ ಸಾಲ್ ಅಂದರೆ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂನ್ ಆಖೈರು ಪರಿಯಂತರ ಜಮಾಯಿಸಿಕೊಳ್ಳುವ ಹಕ್ಕು ತುಮಕೂರ್ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ 1896ನೇ ಇಸವಿ ಸೆಪ್ಟಂಬರ್ ತಾರೀಖು 4ರಲ್ಲು ಬಹಿರಂಗವಾಗಿ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ಹರಾಜು ಮಾಡಲ್ಪಡುತ್ತೆ.

2. ಚಡಸವಾಲ್‌ದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆ ಮೊಬಲಗು ತೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು ಹದಿನೈದು ದಿವಸದವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ ಬಂದಕ್ಕೆ ಬಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ಮಾಡುವದು.

3. ಖಿಸ್ತು ಮೊಬಲಗು ಗೊತ್ತಾದ ಕಾಲದವಳಗಾಗಿ ಹಾಜರ್ಮಾಡದೆ ಹೋದರೆ ಚಡಸವಾಲ್‌ದಾರನ ತೇವಣಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಅವಲ್ ಇಜಾರ್‌ದಾರನ್ನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಉಂಟಾಗುವ ಘಾಯಿದೆ ಭಾಗ ಅವಲ್ ಇಜಾರೆದಾರನು ಹೊಂದಲು ಅರ್ಹನಾಗುವದಿಲ್ಲ

ಎಂ. ವೆಂಕಟನಾರಣಪ್ಪ, ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರ್.

ಮೈಸೂರ್ ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರೀದಾರ ಮೈಸೂರ್ ನಜರ್‌ಬಾದಿನಲ್ಲಿ ಇರುವ ಶಿವಗ್ನಾನಂ

ಪಿಳ್ಳೆಯವರ ವಿಷಯದಲ್ಲಿ—

ಸ್ ೧೮೯೫—96ನೇ ಇಸವಿ ದಿವಾ? ಕೇಸ್ ನಂಬರ್ 263.

ಹುಕುಂ.

ಮೇಲ್ಕಂಡ ಶಿವಗ್ನಾನಂಪಿಳ್ಳೆಯವರು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕಪ್ಪು ಈ ಕೋರ್ಟು ರೂಬರೂ ಅರ್ಜೀದಾರರಾದ ಶಿವಗ್ನಾನಂಪಿಳ್ಳೇರ ಪರವಾಗಿ ಆಡ್ವೊಕೇಟ್ ಮೆಸ್ಸರ್ ನಂಜಪ್ಪನವರನ್ನೂ ಮತ್ತು ಸದರೀಯವರ ಲೇಣೇದಾರರಾದ 1ನೇ ಯತಿರಾಜ ಸಂಪತ್ಕುಮಾರ ಬ್ಯಾಂಕ್ ವಿಜಯಂ ಅಳಕಿಂಗ್ಯಾಚಾರ್ಲು 3ನೇ ಹಿಂದೂ ಯೂನಿಯರ್ ಬ್ಯಾಂಕ್ 18ನೇ ನಾಗಮ್ಮನವರ ತರಫಿ ಆಡ್ವೊಕೇಟ್ ಮೆ|| ರಾಘವಾಚಾರ್ ಇವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್‌ಗೇ ನೋಟೀಸು ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ,—2ನೇ ಜರ್ಮನ್ ಬ್ಯಾಂಕ್ ವಿಜಯಂ ಟರು, 4ನೇ ವೆಂಕಟರಾಮಯ್ಯ, 5ನೇ ಆರ್‌ಕಾಟ್ ನಾರಾಯಣಸ್ವಾಮಿ ಮೊದಲಿ, 6ನೇ ಕಾವೇರಿ ಬ್ಯಾಂಕ್, 7ನೇ ಮಧುರಕಟ್ಟ, 8ನೇ ಕೃಷ್ಣಯ್ಯಂಗಾರ್ರು, 9ನೇ ನಂಜುಂಡಪ್ಪ, 10ನೇ ಅಪ್ಪಾಜಪ್ಪ, 11ನೇ ಅರುಣಾಚಲ ಮೊದಲಿ, 12ನೇ ಪ್ರೋಬಳಾಚಾರಿ, 13ನೇ ಚಿಕ್ಕಬಳ್ಳಾಪುರ ಬ್ಯಾಂಕ್, 14ನೇ ಗೋವಿಂದಪ್ಪ, 15ನೇ ಹೊನ್ನಯ್ಯ, 16ನೇ ಕೆಂಪಣ್ಣ, 17ನೇ ರಾಮಸ್ವಾಮಿಶಟ್ಟಿ, 19ನೇ ವೀರರಾಘವಲು ನಾಯಡು, 20ನೇ ಈರೋಜಿ ನಂಜಾಜಿ, 21ನೇ ಮಳಿಗೆ ಕೆರಿಬಸಪ್ಪ, 22ನೇ ನರಶಿಂಹಯ್ಯ, 23ನೇ ಶಿವಶಂಕರಪ್ಪ, 24ನೇ ಕೃಷ್ಣಯ್ಯ ಗವುಡ, 25ನೇ ಕೀತಾರಾಮಯ್ಯ, 26ನೇ ಮದರಾಸ್ ಹಿಂದೂ ಜನೋಪಕಾರಿ ಕಂಪನಿ, 27ನೇ ಮಂಜಪ್ಪ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಶಿವಗ್ನಾನಂ ಪಿಳ್ಳೆಯವರು ಹೊಂದುವದಕ್ಕೆ ಹಕ್ಕುದಾರರಾ ಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ ೧೮೯೬ನೇ ಇಸವಿ ಆಗಸ್ಟ್ 5ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.